ಅಸಲು ದಾವಾ ನಂ.396/2017

ಡಿ ಡಬ್ಲ್ಯೂ: 1

(ಸಾಕ್ಷಿಯನ್ನು ಈ ದಿನ ದಿನಾಂಕ.30.06.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ ವಾದಿ ಪರ ಶ್ರೀ ವೈ ಬಿ ಟಿ ವಕೀಲರಿಂದಃ

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾ ಸ ಮಾಡಿರುತ್ತೇನೆ. ವಾದಿಯು ತನ್ನ ಜಮೀನದ ಸರ್ವೆ ನಂಬರ 330/1 ರ 4 ಎಕರೆ 5 ಗುಂಟೆ ಜಮೀನಿನ ಕಬ್ಜಾ ವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಜಮೀನು ವಾದಿಗೆ ಸೇರಿರುತ್ತದೆಯೇ ಇಲ್ಲ ಎಂದು ಕೇಳಲಾಗಿ ಸಾಕ್ಷಿ ಆತನ ಜಮೀನೆ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಜಮೀನು ಆತನಿಗೆ ಅವರ ತಂದೆ ಇಂದ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಅಧಿಕಾರ ಪತ್ರ ಯಾರ ಕಡೆ ಇಂದ ತೆಗೆದುಕೊಂಡಿರುತ್ತೀರಾ ಎಂದರೆ ಸಬಿಯಾ ಗೌಸರ ಎಂದು ನುಡಿದಿರುತ್ತಾರೆ. ಎಷ್ಟು ಜನ ಅಧಿಕಾರ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿ ಸಬಿಯಾ ಗೌಸರ, ನಿಜಬಾ, ಮಹ್ಮದ ಅಯಾನ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನನಗೆ ಅಧಿಕಾರ ಪತ್ರ ನೀಡುವಾಗ ಹಯಾನ ತಂದೆ ಅಬ್ದುಲರಜಾಕ ದೊಡಮನಿ ಅವರು ವಯಸ್ಕರಾಗಿರಲಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಡಿ1 ಅನ್ನು ತೋರಿಸಿ ಅದರಲ್ಲಿ ಸದರಿಯವರ ವಯಸ್ಸು 18 ಎಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಅಧಿಕಾರ ಪತ್ರ ಯಾವಾಗ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 2 ವರ್ಷಗಳ ಹಿಂದೆ ಎಂದು ನುಡಿದಿರುತ್ತಾರೆ. ಸದರಿ ಅಧಿಕಾರ ಪತ್ರ ದಿ.25.06.2024 ರಂದು ಸಿಂದಗಿಯಲ್ಲಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿ ಯಾರ ಮುಂದೆ ನೋಟರಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ಅವರ ಹೆಸರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ಸದರಿ ದಾಖಲಾತಿ ತೋರಿಸಿ ನೊಟರಿ ಶೀಲ್ ನಲ್ಲಿ ಎಸ್ ಬಿ ಪಾಟೀಲ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಗೆ ಸದರಿ ನೋಟರಿಯವರಿಗೆ ನೋಟರಿ ಮಾಡಲು 2021 ರವರೆಗೆ ಮಾತ್ರ ಅಧಿಕಾರ ಇದ್ದು 2024 ರಲ್ಲಿ ನೊಟರಿ ಮಾಡಲು ಅಧಿಕಾರ ಇದ್ದಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿದ್ದರೂ ಸಹ ಸದರಿ ಪ್ರಶ್ನೆ ಸಂಬಂಧಿಸದ ಕಾರಣ ಅದನ್ನು ತಿರಸ್ಕರಿಸಲಾಯಿತು.

ವಾದಿಯ ದಾವಾ ಆಸ್ತಿಯ ಉತ್ತರ ಹಾಗೂ ದಕ್ಷಿಣ ದಿಕ್ಕಿಗೆ ಒಡ್ಡು ಇರುತ್ತದೆ ಎಂದರೆ ಸರಿಯಲ್ಲ. ಉತ್ತರ ದಿಕ್ಕಿಗೆ ಇರುವ ಒಡ್ಡು 10 ಅಡಿ ಎತ್ತರ ಇದೆ ಎಂದರೆ ಸರಿಯಲ್ಲ. ಅದೇ ರೀತಿ ದಕ್ಷಿಣ ದಿಕ್ಕಿಗೆ ಇರುವ ಒಡ್ಡು 8 ಅಡಿ ಎತ್ತರ ಇದೆ ಎಂದರೆ ಸರಿಯಲ್ಲ. ದಿನಾಂಕ.29.01.2009 ರಂದು ಪ್ರತಿವಾದಿಯರು ತಮ್ಮ ಹಾಗೂ ವಾದಿಯ ಜಮೀನನ್ನು ಅಳತೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಅಳತೆ ಮಾಡಿಸಿರುವುದಿಲ್ಲ. ದಿನಾಂಕ.27.01.2009 ರಂದು ತಹಶೀಲ್ದಾರ ಅವರಿಗೆ ಅರ್ಜಿ ನೀಡಿದ್ದೆವು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ತಮ್ಮ ಅರ್ಜಿಯಂತೆ ಜಮೀನು ಅಳತೆ ಮಾಡಲು ಯಾವಾಗ ಬಂದಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ವಾದಿಗೆ ಅಳತೆ ಮಾಡಿಸುವುದು ಗೊತ್ತಿರುವುದಿಲ್ಲ ಎಂದರೆ ಆತನಿಗು ಸಹ ನೋಟಿಸ್ ಸರ್ವ್ ಆಗಿತ್ತು ಎಂದು ನುಡಿದಿರುತ್ತಾರೆ. ವಾದಿಗೆ ನೋಟಿಸ್ ಜಾರಿಯಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಸರಿಯಲ್ಲ.

ಸಾಕ್ಷಿಗೆ 1 ನೆ ಪ್ರತಿವಾದಿಯು ಅಳತೆ ಸಮಯದಲ್ಲಿ ವಾದಿ ಗೈರು ಹಾಜರಿದ್ದರು ಎಂದು ಭೂ ಮಾಪನ ಅಧಿಕಾರಿ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿ ವಾದಿ ಹಾಜರಿದ್ದರು ಎಂದು ಮಾತ್ರ ನುಡಿದಿರುತ್ತಾರೆ. ಸಾಕ್ಷಿಗೆ ಹೇಳಿಕೆ ಅಂಶಗಳನ್ನು ಓದಿ ಹೇಳಲಾಗಿ ಸಾಕ್ಷಿ ಅಂಶಗಳು ಇರಬಹುದು ಆದರೆ ಸಹಿ 1 ನೇ ಪ್ರತಿವಾದಿಯರದು ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. 1 ನೆ ಪ್ರತಿವಾದಿ ಜೀವಂತ ಇರುತ್ತಾನೆ ಎಂದರೆ ಇದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ಏನು ಕೆಲಸ ಮಾಡುತ್ತಾನೆ ಎಂದರೆ ಸದರಿಯವರು ಬಸ್ ನಿರ್ವಾಹಕ ಎಂದು ನುಡಿದಿರುತ್ತಾರೆ. 1 ನೆ ಪ್ರತಿವಾದಿಯು ನ್ಯಾಯಾಲಯಕ್ಕೆ ಬಂದು ನಿಜ ಸಂಗತಿಯನ್ನು ಹೇಳುತ್ತಾರೆ ಎಂಬ ಉದ್ದೇಶದಿಂದ ಅವರ ಕಡೆ ಇಂದ ಸುಳ್ಳು ಮುಖ್ತ್ಯಾರ ಪತ್ರವನ್ನು ಬರೆಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೆ ಪ್ರತಿವಾದಿಯು ಗೈರು ಹಾಜರಿದ್ದು ಸ್ಧ್ಯ ಆತನ ಹೆಂಡತಿ ದಾವೆಯಲ್ಲಿ ಮುಂದುವರೆದಿದ್ದು ಅವರು ಸದೃಢವಾಗಿರುತ್ತಾರೆ ಎಂದರೆ ಸಾಕ್ಷಿ ಅವರಿಗೆ ಬಿ ಪಿ ಸುಗರ್ ಇದ್ದು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯರ ಹೆಂಡತಿ ಮುಖ್ತ್ಯಾರ ಪತ್ರ ಬರೆದುಕೊಡುವ ಸಮಯದಲ್ಲಿ ತಮಗೆ ಆರೋಗ್ಯ ಸರಿ ಇಲ್ಲದ ಕಾರಣ ( ಬಿ ಪಿ ಸುಗರ್ ಇರುವ ಕಾರಣ) ಓಡಾಡಲು ಬರುವುದಿಲ್ಲ ಎಂಬ ಅಂಶವನ್ನು ಮುಖ್ತ್ಯಾರ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ಸಾಕ್ಷಿಗೆ ಮುಖ್ತ್ಯಾರ ಪತ್ರ ವನ್ನು ಓದಿರುತ್ತೀರಾ ಎಂದರೆ ಓದಿದ್ದೇನೆ ಹಾಗಿದ್ದಲ್ಲಿ 2 ನೆ ಪ್ರತಿವಾದಿ ಹೆಂಡತಿ ಯಾವ ಕಾರಣ ನಮೂಹದು ಮಾಡಿರುತ್ತಾರೆ ಎಂದರೆ ಸಾಕ್ಷಿ ಯಾವುದೆ ಉತ್ತರ ನೀಡಿರುವುದಿಲ್ಲ.

ಪ್ರತಿವಾದಿ 2 ಬಿ ಮತ್ತು ಸಿ ಅವರಿಗೂ ಸಹ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯುವ ಅವಕಾಶ ಇತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.